## ಆಂಟನ್ ಚೆಕಾವ್ (1860–1904)

ರಷ್ಯಾದ ಲೇಖಕ ಆಂಟನ್ ಪಾವ್ಲೊವಿಚ್ ಚೆಕಾವ್ ಬಡಕುಟುಂಬದಲ್ಲಿ ಹುಟ್ಟಿದ. ವೃತ್ತಿಯಲ್ಲಿ ವೈದ್ಯನಾಗಿದ್ದ ಅವನು ಪ್ರಸಿದ್ಧನಾಗಿದ್ದು ಸಾಹಿತ್ಯ ಕ್ಷೇತ್ರದಲ್ಲಿ. ಅವನು ನಾಟಕ ರಚನೆಯಲ್ಲಿ ಹೆಸರುಗಳಿಸಿದನಾದರೂ ಆಧುನಿಕ ಸಣ್ಣಕತೆಗಳ ಪಿತಾಮಹನೆಂದು ಅವನನ್ನು ಗುರುತಿಸುತ್ತಾರೆ. ಅವನ ಸಣ್ಣಕತೆಗಳು ಸರಳವಾಗಿದ್ದು ಹತ್ತೊಂಬತ್ತನೇ ಶತಮಾನದ ರಷ್ಯಾದ ಜನಜೀವನವನ್ನು ಬಿಂಬಿಸುತ್ತವೆ.

ಎಲೆಯಿಂದಲೇ ಎಲ್ಲ ಎಡವಟ್ಟು ಆದದ್ದು, ಆ ಹೊತ್ತಿಗೆ ಈ ಪಿಶಾಚಿ ಎಲ್ಲಿಂದ ವಕ್ಕರಿಸಿತೋ?"

"ಪುಟ್ಟ ಪೋರನೊಬ್ಬ ಉರುಳುತ್ತಾ ಬರುತಿರುವಾಗ, ಉರುಳುತ್ತಾ ಬರುತಿರುವಾಗ ಕೆಳದಾರಿಯಲಿ ಆ ಮುದ್ದು ಮಗು–ಆ ಮುದ್ದು ಮಗು."

"ಆ ಬಾಲಕ ಓಡ್ತಾ ಇದ್ದ ಅಂದ್ರೆ, ಅವನೇನಾದ್ರೂ ಅತಿ ತಿಂದಿದ್ದಿರಬಹುದು ಅಥವಾ ತುಂಬಾ ತುಂಟ ಇರಬಹುದು. ಹೆತ್ತವರು ಯಾವತ್ತೂ ತಮ್ಮ ಮಕ್ಕಳನ್ನು ಕೆಲಸಕ್ಕೆ ಇಡುವುದಿಲ್ಲ. ಆಟ ಆಡೋ ಬದಲು ಆ ಹುಡುಗ ಸೀಳೋದು, ಉರಿಸೋದು ಅಥವಾ ಬೈಬಲ್ ಓದೋದು ಮಾಡ್ತಾ ಇರಬೇಕು. ಛೇ! ನನಗೆ ಇದರಿಂದ ಹೊರಬರುವ ಪ್ರಜ್ಞೆಯೇ ಇಲ್ಲ! ಎಂಥ ಮೂರ್ಖ ನಾನು. ರಾತ್ರಿಯೂಟದ ಅನಂತರವೂ ಇದ್ದೆ! ನಾನ್ಯಾಕೆ ಊಟನೂ ಮಾಡಿಲ್ಲ, ಮನೆಗೂ ಹೋಗಿಲ್ಲ?"

"ಕಿಟಕಿಯ ಹತ್ತಿರ ಅವನಮ್ಮ ನಿಂತು ಕೈ ಬೆರಳು ತೋರಿಸುತಾ, ಕೈ ಬೆರಳು ತೋರಿಸುತಾ ಹುಡುಗನ ಕಡೆಗೆ."

"ಅವನತ್ತ ಆಕೆ ಬೆರಳು ತೋರಿಸ್ತಿದ್ದಳಾ? ಅವಳಲ್ಲೇ ಏನೋ ಸಮಸ್ಯೆ ಇದೆ, ಅವಳಿಗೆ ಬಾಗಿಲಿಂದ ಹೊರ ಬಂದು ಅವನಿಗೆ ಶಿಕ್ಷೆ ಕೊಡಲೂ ಆಗದಷ್ಟು ಸೋಮಾರಿತನ. ಅವನ ಪುಟ್ಟದಾದ ಕೋಟು ಹಿಡಿದು ಸರಿಯಾಗಿ ನಾಲ್ಕು ತದಕಬೇಕು ಆಕೆ. ಬರೀ ಬೆರಳಲ್ಲಿ ಗದರಿಸೋದಕ್ಕಿಂತ ಹಾಗೇ ಮಾಡಿದ್ರೇ ಆತನಿಗೆ ಸರಿ. ಈಗ ಅವನನ್ನು ಆಕೆ ಸರಿಯಾಗಿ ಕಾಳಜಿಯಿಂದ ನೋಡಿಕೊಂಡಿಲ್ಲ ಅಂದ್ರೆ ಮುಂದೊಂದ ದಿನ ದೊಡ್ಡ ಕುಡುಕ ಆಗ್ತಾನೆ. ಇದನ್ನ ಯಾರು ಬರೆದಿದ್ದಾರೆ?" ಪ್ರಾಟ್ಕಿನ್ ದೊಡ್ಡ ಸ್ವರದಲ್ಲಿ ಕೇಳಿದ.

"ಪುಷ್ಕಿನ್, ಪಪ್ಪಾ."

"ಪುಷ್ಕಿನ್? ಅವನೆಂತಾ ಮೂರ್ಖ! ತಾವೇನು ಹೇಳ್ತಿದ್ದಿವಿ ಅಂತಾ ಅವರಿಗೇ ಗೊತ್ತಿಲ್ದೇ ಸುಮ್ನೆ ಬರಿಯೋದನ್ನು ಈ ಜನ ಇಷ್ಟ ಪಡ್ತಾರೆ."

"ಪಪ್ಪಾ, ಇಲ್ಲೊಬ್ಬ ರೈತ ಹಿಟ್ಟಿನ ಹೊರೆ ಜೊತೆ ಬಂದಿದ್ದಾನೆ."

"ಯಾರಾದ್ರೂ ಅದರ ಜವಾಬ್ದಾರಿ ತಗೊಳ್ಳಲಿ ಬಿಡು." ಹಿಟ್ಟು ಬಂದಿರೋದು ಕೂಡಾ ಪ್ರಾಟ್ಕಿನ್‌ನನ್ನು ಖುಷಿಗೊಳಿಸಲಿಲ್ಲ. ತನ್ನನ್ನು ಸಮಾಧಾನಮಾಡಿಕೊಳ್ಳಲು ಪ್ರಯತ್ನಿಸಿದಷ್ಟು, ಕಳೆದುಕೊಂಡಿದ್ದರ ಪ್ರಜ್ಞೆಯಿಂದ ಆತನಲ್ಲಿ ಹತಾಶೆ ಹೆಚ್ಚುತ್ತಿತ್ತು. ಎಂಟು ರೂಬಲ್ ಅನ್ನೊದು ಎಂಟು ನೂರು ರೂಬಲ್‌ಗಳೇನೋ ಎನ್ನುವ ಮಟ್ಟಿಗೆ ಆತ ದುಃಖಿಸತೊಡಗಿದ. ವ್ಯಾನಿಯಾ ತನ್ನ ಅಭ್ಯಾಸ ಮುಗಿಸ್ತಾ ಇದ್ದ ಹಾಗೇ ಅಲ್ಲಿ ಮೌನ ನೆಲೆಸಿತು. ಪ್ರಾಟ್ಕಿನ್ ಕಿಟಕಿಯ ಹತ್ತಿರ ಮಂಕಾಗಿ ನಿಂತುಕೊಂಡಿದ್ದ. ಆತನ ಪರಿತಾಪದಿಂದ ಕೂಡಿದ ನೋಟ ಹೂದೋಟದಲ್ಲಿ ಬೀಳುತ್ತಿದ್ದ ಹಿಮರಾಶಿಯ ಮೇಲೆ ನಿಂತಿತ್ತು. ಹಿಮರಾಶಿಯ ಆ ದೃಶ್ಯ ಆತನ ಎದೆಯೊಳಗಿನ ಗಾಯವನ್ನು ಇನ್ನಷ್ಟು ಆಳಕ್ಕೆ ಕೊರೆದಿತ್ತು. ಪೊಲೀಸ್ ಚೀಫ್ ಆಫೀಸರ್‌ನ ಜೊತೆ ನಿನ್ನೆಯ ತನ್ನ ಮುಖಾಮುಖಿಯನ್ನೆ ನೆನಪಿಸುತ್ತಿತ್ತು. ಈ ಹತಾಶೆಯಿಂದ ಹೊರಬರುವ ಮಾರ್ಗ ಎಲ್ಲಿಗೆ ತಲುಪಿತು ಅಂದ್ರೆ ಆತ ಕ್ಷಣ ಮಾತ್ರವೂ ತಡಮಾಡಲಿಲ್ಲ. ಯಾಕೆಂದರೆ, ಅದನ್ನು ಬಹಳ ಹೊತ್ತು ಸಹಿಸಿಕೊಳ್ಳಲು ಅವನಿಗೆ ಸಾಧ್ಯವಿರಲಿಲ್ಲ.

"ವ್ಯಾನಿಯಾ!" ಪ್ರಾಟ್ಕಿನ್ ಹೆಚ್ಚು ಕಮ್ಮಿ ಕಿರುಚಿದ. "ಬಾ, ಇಲ್ಲಿ, ಬಾರಿಸ್ತಿನಿ ನಿನಗೆ, ನಿನ್ನೆ ಕಿಟಕಿ ಗಾಜು ಒಡೆದಿದ್ದಿಯಲ್ಲ!" ●